ಬಿಡುಗಡೆಯಾಗಿರುವುದು ಹಾಗೆ ವಿಧಾನಸಭಾ ಕ್ಷೇತ್ರವಾರು ಲೋಕೋಪಯೋಗಿ ಇಲಾಖೆಯಲ್ಲಿ ಹಣ ಬಿಡುಗಡೆ ಮಾಡಲು ಇರುವ ತೊಂದರೆಗಳೇನು?

ಶ್ರೀ ಶಿವಾನಂದ ಪೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ತಾರತಮ್ಯವಾಗಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ರಸ್ತೆಗಳು ರಾಜ್ಯ ಹೆದ್ದಾರಿ ಮತ್ತು ಮುಖ್ಯ ಜಿಲ್ಲಾ ರಸ್ತೆಗಳಾಗಿದ್ದು ಯಾವುದೇ ಒಂದು ಕ್ಷೇತ್ರಕ್ಕೆ ಸೀಮಿತವಾಗುವುದಿಲ್ಲ. ಅಲ್ಲದೆ ಜಿಲ್ಲಾ ಮಟ್ಟದ ಆಡಳಿತಾತ್ಮಕ ಕಟ್ಟಡಗಳ ಹಾಗೂ ವಸತಿ ಗೃಹಗಳ ನಿರ್ಮಾಣವೂ ಕೂಡ ಯಾವುದೇ ಒಂದು ಕ್ಷೇತ್ರಕ್ಕೆ ಸೀಮಿತವಾಗುವುದಿಲ್ಲ. ಆದ್ದರಿಂದ ಗ್ರಾಮ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಮಾದರಿಯಲ್ಲಿ ಹಣ ಬಿಡುಗಡೆ ಕಾರ್ಯ ಸಾಧ್ಯವಿಲ್ಲ.

ಇಂಡಿ ಮತ ಕ್ಷೇತ್ರದಲ್ಲಿ ವಿದ್ಯುತ್ ಯೋಜನೆ

531 - ಶ್ರೀ ರವಿಕಾಂತ ಎಸ್. ಪಾಟೀಲ್ (ಇಂಡಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ಮತ ಕ್ಷೇತ್ರದಲ್ಲಿ ಹೊಸ ಸರ್ಕಾರ ರಚನೆಯಾದ ಮೇಲೆ ಹೊಟ್ಟಿರುವ ಭಾಗ್ಯಜ್ಯೋತಿಗಳೆಷ್ಟು?

ಆ) ಇಂಡಿ ಮತ ಕ್ಷೇತ್ರದ 2 ತಾಲ್ಲೂಕುಗಳನ್ನೊಳಗೊಂಡ (ಇಂಡಿ ಮತ್ತು ಸಿಂದಗಿ) ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, 2 ತಾಲ್ಲೂಕುಗಳನ್ನೊಳಗೊಂಡ ಈ ಮತ ಕ್ಷೇತ್ರಕ್ಕೆ ಕನಿಷ್ಟ 2000 ಭಾಗ್ಯಜ್ಯೋತಿಗಳನ್ನು ಒದಗಿಸಲು ಸರ್ಕಾರ ಶ್ರಮ ಕೈಗೊಳ್ಳುವುದೇ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಪ್ರಸಕ್ತ ವರ್ಷವಾದ 1995-96ರಲ್ಲಿ ಇಂಡಿ ಮತ ಕ್ಷೇತ್ರದಲ್ಲಿ ಭಾಗ್ಯಜ್ಯೋತಿ ಯೋಜನೆಯಡಿ 1000 ಫಲಾನುಭವಿಗಳ ಮನೆಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲು ಗುರಿ ನಿಗದಿಪಡಿಸಿದೆ.

ಆ) ಹೌದು

ಇ) ಪ್ರತೀ ಗ್ರಾಮಾಂತರ ವಿಧಾನ ಸಭಾ ಕ್ಷೇತ್ರಕ್ಕೆ 1000 ಭಾಗ್ಯಜ್ಯೋತಿ ಸಂಪರ್ಕಗಳನ್ನು ನೀಡಲಾಗುತ್ತದೆ ಇದರ ಪ್ರಕಾರ ಇಂಡಿ ಮತ ಕ್ಷೇತ್ರ ಮತ್ತು ಸಿಂದಗಿ ಮತ ಕ್ಷೇತ್ರಗಳಿಗೆ ತಲಾ 1000 ಭಾಗ್ಯಜ್ಯೋತಿ ಸಂಪರ್ಕಗಳನ್ನು ನೀಡಲಾಗುವುದು ಇಂಡಿ ಮತ ಕ್ಷೇತ್ರಕ್ಕೆ 2000 ಭಾಗ್ಯಜ್ಯೋತಿ ಸಂಪರ್ಕಗಳನ್ನು ನೀಡಲು ಸಾಧ್ಯವಿಲ್ಲ.

ಬಿನ್ನಿಪೇಟೆ ವಿಧಾನ ಸಭಾಕ್ಷೇತ್ರದಲ್ಲಿ ವಿದ್ಯುತ್ ಅಭಾವ

2519 - ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿನ್ನಿಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ವಿದ್ಯುತ್ ನಿಲುಗಡೆ ಪ್ರತಿದಿನ ಎಷ್ಟು ಗಂಟೆಗಳಕಾಲ ಆಗುತ್ತಿರುತ್ತದೆ?

ಆ) ಈ ಕ್ಷೇತ್ರದಲ್ಲಿ ಹಲವಾರು ಭಾಗಗಳಲ್ಲಿ ಪ್ರತಿ ದಿವಸ ಹಲವಾರು ಗಂಟೆಗಳ ಕಾಲ ವಿದ್ಯುತ್ ಸಂಪರ್ಕವಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?